# 7

# ಯೇಸುವಿನ ಸಭೆ: ವರ್ಣನೆ

ನೀವು ಬಾಪ್ತಿಸ್ಮ ಹೊಂದಿದಾಗ ಕರ್ತನು ನಿಮ್ಮನ್ನು ತನ್ನ ಸಭೆಗೆ ಕೂಡಿಸುವನು. ಆಗ ನೀವು ಕರ್ತನ ಸಭೆಯ ಸದಸ್ಯರಾಗಿ ಕಾರ್ಯಮಾಡುವ ಅಗತ್ಯತೆಯಿರುವುದು. ಇಂದು ಅನೇಕ ಸಭೆಗಳು ಅಸ್ತಿತ್ವದಲ್ಲಿರುವದರಿಂದ[1] ಯೇಸುವಿನ ಸಭೆಯನ್ನು ಗುರುತಿಸುವುದು ಸುಲಭವಾಗುವದಿಲ್ಲ. ಮುಂದಿನ ಕೆಲವು ಪಾಠಗಳಲ್ಲಿ ಹೊಸ ಒಡಂಬಡಿಕೆಯಲ್ಲಿಯ ಸಭೆಯ ಗುಣಲಕ್ಷಣಗಳನ್ನು ಪರೀಕ್ಷಿಸುವೆವು. ಆ ಗುಣಲಕ್ಷಣಗಳ ಬೆಳಕಿನಲ್ಲಿ ಪ್ರತಿಯೊಂದು ಧಾರ್ಮಿಕ ಸಂಸ್ಥೆಗಳು ಪರೀಕ್ಷಿಸಲ್ಪಡಬೇಕು.

ಪ್ರತಿಯೊಂದು ಗುಣವಾಚಕವನ್ನು ಆಳವಾಗಿ ಅಧ್ಯಯನ ಮಾಡಲು ಸಮಯ ಮತ್ತು ಸ್ಥಳ ಸಾಲುವದಿಲ್ಲ. ನಿಮಗೆ ಪ್ರಶ್ನೆಗಳಿರುವವು. ಅವುಗಳನ್ನು ಬರೆಯಿರು ಮತ್ತು ಈ ಅಧ್ಯಯನ ಮಾರ್ಗದರ್ಶಿಯನ್ನು ನಿಮಗೆ ಕೊಟ್ಟವರೊಂದಿಗೆ ಹಂಚಿ ಕೊಳ್ಳಿರಿ. ಯಾವುದೇ ಈ ವಿಷಯಗಳ ಬಗ್ಗೆ ನಿಮ್ಮೊಂದಿಗೆ ಹೆಚ್ಚು ವಿವರವಾಗಿ ಅಧ್ಯಯನ ಮಾಡಲು ಅವರು ಸಂತೋಷಪಡುವರು.

ಮೊದಲು ನಾವು ಬೈಬಲ್ ನೇಮಕವಾದ ವರ್ಣನೆಗಳನ್ನು ಯೋಚಿಸುವೆವು. ಸಭೆಗೆ ಇಡೀಯಾಗಿ, ಆ ಮೇಲೆ ಸಭೆಯ ವೈಯಕ್ತಿಕ ಸದಸ್ಯರು ಹೇಗೆ ಸೂಚಿಸಿದ್ದಾರೆ ಎಂಬುದಕ್ಕೆ ಸಂಬಂಧಿಸಿ ನೋಡುವೆವು.

## ವರ್ಣನೆ: ಹಿನ್ನೆಲೆ

ನಿರ್ದಿಷ್ಟವಾದ ವರ್ಣನೆಗಳನ್ನು ಯೋಚಿಸುವ ಮೊದಲು ಹಿನ್ನೆಲಯ ಬಗ್ಗೆ ಕೆಲವು ಮಾತನ್ನು ಹೇಳಲು ಬಯಸುತ್ತೇನೆ. ಮೊದಲನೆಯದು, "ಹೆಸರುಗಳು" ಎಂದು ಉಪಯೋಗಿಸದೇ "ವರ್ಣನೆ" ಎಂದು ಉಪಯೋಗಿಸುತ್ತೇನೆ. ಹೊಸ ಒಡಂಬಡಿಕೆಯಲ್ಲಿ ಸಭೆಗೆ ಅಂಕಿತ ನಾಮವು[2] ಕೊಡಲ್ಪಡದೇ ಇದ್ದುದರಿಂದ ನಾನು ಹಾಗೆ ಮಾಡುತ್ತೇನೆ.

"ವರ್ಣನೆ" ಮತ್ತು "ಹೆಸರು" ಎಂಬುದರ ಮಧ್ಯದಲ್ಲಿ ಯಾವ ಭಿನ್ನತೆಯಿದೆ? ಇದನ್ನು ನೀವು ಓದುತ್ತಿರುವಾಗ ಯಾವುದಾದರೊಂದರ ಮೇಲೆ ಬಹುಶಃ ಕುಳಿತುಕೊಂಡಿರುವಿರಿ. ನನ್ನ ಉದಾಹರಣೆಯ ಉದ್ದೇಶಕ್ಕಾಗಿ, ಅದು ಒಂದು ಖುರ್ಚಿ ಎಂದು ತಿಳಿದು ಕೊಳ್ಳೋಣ. ಅದನ್ನು ನೀವು "ಖುರ್ಚಿ" ಎಂದು ಕರೆದರೆ, (ಇಲ್ಲವೇ "ಒಂದು ಆಸನ" ಅಥವಾ ಅದರಂತಿರುವ ಯಾವುದೋ ಒಂದು) ಅದು ಏನಾಗಿದೆಯೆಂಬುದನ್ನು ಮಾತಾಡುತ್ತಿರುವಿರಿ. ಅದು ವಿವರಣಾತ್ಮಕವಾದ ಪದವಾಗಿರುವುದು; ಅದು ಸೂಚಿತ ವರ್ಣನೆ ಯಾಗಿರುವುದು. ನೀವು ಅದಕ್ಕೆ ಒಂದು ಹೆಸರನ್ನು ಕೊಡಲು ತೀರ್ಮಾನಿಸಬಹುದು. ಉದಾಹರಣೆಯಾಗಿ, ಅದಕ್ಕೆ ನೀವು "G" ದೊಡ್ಡ ಅಕ್ಷರದೊಂದಿಗೆ "George" ಎಂದು ಹೆಸರಿಡಬಹುದು: "ಜಾರ್ಜ ಖುರ್ಚಿ" ಎಂಬುದು ಅಂಕಿತ ನಾಮವಾಗಿದೆ.

ನಿಜವಾಗಿಯು ನನ್ನ ಉದಾಹರಣೆಯು ಬುದ್ಧಿಯಿಲ್ಲದ್ದು. ಆದರೆ ಹೊಸ ಒಡಂಬಡಿಕೆಯು ಸರಿಯಾದ ಅಂಕಿತ ನಾಮವನಲ್ಲ, ಆದರೆ ಸಭೆಗಾಗಿ ಸೂಚಿತ ವರ್ಣನೆಗಳನ್ನು ಉಪಯೋಗಿಸುತ್ತದೆಂಬುದನ್ನು ತಿಳಿಸಲು ಪ್ರಯತ್ನಿಸುತ್ತಿದ್ದೇನೆ. ಸಭೆಯನ್ನು ಕುರಿತಾಗಿ

ಉಪಯೋಗಿಸಿದ ಎಲ್ಲಾ ಮಾತುಗಳು ಅದು ಏನು ಎಂಬುದನ್ನು ಹೇಳುತ್ತದೆ.

ಕರ್ತನ ಸಭೆಗಾಗಿ ನಾನು ಸೂಚಿತ ವರ್ಣನೆಯನ್ನು ಉಪಯೋಗಿಸುವಾಗ ಆ "church" ಎಂಬ ಪದದಲ್ಲಿ ಸಣ್ಣ "c" ಉಪಯೋಗಿಸುತ್ತೇನೆ.[3] ಇದನ್ನು ನಾನು ಒಂದು ದೊಡ್ಡ ವಿಷಯವನ್ನಾಗಿ[4] ಮಾಡುವದಿಲ್ಲ. ಆದರೆ ನಾನು ಒಂದು ಅಂಕಿತ ನಾಮವನ್ನಲ್ಲ, ಸೂಚಿತ ವರ್ಣನೆಯನ್ನು ಉಪಯೋಗಿಸುತ್ತಿರುವದನ್ನು ಒತ್ತಿ ಹೇಳುತ್ತೇನೆ ಎಂದು ಸೂಚಿಸಲು ಹಾಗೆ ಮಾಡುತ್ತೇನೆ.

ಎರಡನೆಯದು, ನಿಯಮವಾಗಿ, ಸಭೆಗಾಗಿ ಸೂಚಿತ ವರ್ಣನೆಯು ಕ್ರಿಸ್ತನನ್ನೂ ಆತನ ತಂದೆಯನ್ನೂ ಗೌರವಿಸುತ್ತದೆ. ಯೇಸುವಿಗೆ "ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರು" (ಫಿಲಿಪ್ಪಿ 2:9) ಇರುತ್ತದೆ. ಸಭಾ ಪಂಗಡಗಳ ಹೆಸರುಗಳು ಸಭಾ ಪಂಗಡಗಳ ಕೆಲವು ಲಕ್ಷಣಗಳನ್ನೂ ಸ್ಥಾಪಕರನ್ನೂ ಇಲ್ಲವೇ ಯಾವುದಾದರು ಬೋಧನೆಯನ್ನು ಹೊಗಳುತ್ತವೆ. ಕರ್ತನು ಮಾತ್ರವೇ ಘನಪಡಿಸಲ್ಪಡಬೇಕು. "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯು ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ" (ಅಪೊಸ್ತಲರ ಕೃತ್ಯ 4:12) ಎಂದು ಪೇತ್ರನು ಹೇಳಿದನು.

## ವರ್ಣನೆ: ಸಂಪೂರ್ಣವಾಗಿ

ಇದೆಲ್ಲವನ್ನು ಮನಸ್ಸಿನಲ್ಲಿಟ್ಟುಕೊಂಡು, ಸಂಪೂರ್ಣವಾಗಿ ಸಭೆಗಿರುವ ಸೂಚಿತ ವರ್ಣನೆಗಳನ್ನು ನೋಡೋಣ. ಹೆಚ್ಚಾದ ಸಮಯದಲ್ಲಿ ಹೊಸ ಒಡಂಬಡಿಕೆಯಲ್ಲಿ ಸಭೆಯು "ಚರ್ಚ್" ಎಂದು ಕರೆಯಲ್ಪಟ್ಟಿದೆ (ಅಪೊಸ್ತಲರ ಕೃತ್ಯ 5:11; 8:1, 3; 9:31; 11:22, 26). ಆದುದರಿಂದ ನನ್ನ ಬರಹಗಳಲ್ಲಿಯೂ ಬೋಧನೆಯಲ್ಲಿಯೂ "ಸಭೆಯನ್ನು" ಬಿಟ್ಟು ಬೇರಾವುದನ್ನು ಸಭೆ ಎಂದು ಸಂಬಂಧಿಸಿ ಹೇಳುವದಿಲ್ಲ.

ಆಗಾಗ, ಸಭೆಗೆ ಸಂಬಂಧಿಸಿ ವಿವರಣಾತ್ಮಕ ಮಾತುಗಳನ್ನು ಬೈಬಲು ಉಪಯೋಗಿಸುತ್ತದೆ. ಉದಾಹರಣೆಯಾಗಿ "ಕರ್ತನ ಸಭೆ" ಎಂದು ಪೌಲನು ಹೇಳಿದ್ದಾನೆ (ಅಪೊಸ್ತಲ ಕೃತ್ಯ 20:28; ASV).[5] ಇಬ್ರಿಯ 12:23 "ಚೊಚ್ಚಲು ಮಕ್ಕಳ ಸಭ" ಎಂದು ಸಭೆಯು ಕರೆಯಲ್ಪಟ್ಟಿದೆ.[6] ಅನೇಕ ಸಲ ಉಪಯೋಗಿಸುವ ಮಾತು "ದೇವರ ಸಭೆ" ಎಂದು (1 ಕೊರಿಂಥ 1:2; 15:9; 2 ಕೊರಿಂಥ 1:1; ಗಲಾತ್ಯ 1:13; ನೋಡಿರಿ. 1 ತಿಮೊಥೆ 3:15).

ರೋಮಾಪುರ 16:16ರಲ್ಲಿ ಪೌಲನು ತನ್ನ ಕ್ಷೇತ್ರದಲ್ಲಿದ್ದ ಹಲವಾರು ಸಭೆಗಳಿಗೆ ಸಂಬಂಧಿಸಿ "ಕ್ರಿಸ್ತನ ಎಲ್ಲಾ ಸಭೆಗಳವರು ನಿಮ್ಮನ್ನು ವಂದಿಸುವರು"[7] ಎಂದು ಹೇಳಿದ್ದಾನೆ. "ಕ್ರಿಸ್ತನ ಸಭೆ" ಎಂಬುದು ಒಂದು ಸಭಾಪಂಗಡದ ಹೆಸರಾಗಿರುವದಿಲ್ಲ. ಸಭೆಗೆ ವಿವರಣಾತ್ಮಕ ಮಾತಾಗಿರುತ್ತದೆ. "ಕ್ರಿಸ್ತನ" ಅಂದರೆ "ಕ್ರಿಸ್ತನಿಗೆ ಒಳಪಟ್ಟದ್ದು" ಎಂದರ್ಥ.[8] "ಕ್ರಿಸ್ತನ ಸಭೆಗಳು" ಅಂದರೆ "ಕ್ರಿಸ್ತನಿಗೆ ಒಳಪಟ್ಟದ್ದು" ಎಂದರ್ಥ. "ಕ್ರಿಸ್ತನ ಸಭೆ" (Christ's church) ಎಂಬುದು ಅದೇ ಅರ್ಥ ಕೊಡುತ್ತದೆ. "ಕ್ರಿಸ್ತನ ಸಭೆ" ಇಲ್ಲವೇ "ಕ್ರಿಸ್ತ ಸಭೆಗಳು" ಎಂಬ ಮಾತುಗಳನ್ನು ನಾವು ಉಪಯೋಗಿಸುವಾಗ, ಯೇಸುವಿಗೆ ಒಳಪಟ್ಟ ಸಭೆ ಇಲ್ಲವೆ ಸಭೆಗಳು ಎಂದರ್ಥವಾಗುವುದು.

## ವರ್ಣನೆ: ವ್ಯಕ್ತಿಗಳಂತೆ

ಸಭೆಯ ವೈಯಕ್ತಿಕ ಜನರು ಹೇಗೆ ಕರೆಯಲ್ಪಟ್ಟಿದ್ದಾರೆ? ವೈಯಕ್ತಿಕ ಸದಸ್ಯರನ್ನು

ಸಂಬಂಧಿಸಿ ವಿವಿಧವಾದ ಪದಗಳನ್ನು ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲ್ಪಟ್ಟಿವೆ. ಇಲ್ಲಿ ಹಲವು ಇವೆ:

- "ಸಹೋದರರು"[9] ಮತ್ತು "ಸಹೋದರಿಯರು" (ಅಪೊಸ್ತಲರ ಕೃತ್ಯ 6:3; 9:30; ರೋಮಾಪುರ 16:1; ಯಾಕೋಬ 2:15). ಇದು ಬಹಳ ಸಾಮಾನ್ಯವಾಗಿ ಉಪಯೋಗಿಸಿದ ಪದ. ಇದು ಒಂದು.
- ಕುಟುಂಬದ (ಆತ್ಮಿಕ ಕುಟುಂಬದ) ಸಂಬಂಧವನ್ನು ಸೂಚಿಸುತ್ತದೆ.
- "ಪರಿಶುದ್ಧರು" (ರೋಮಾಪುರ 1:7; 8:27; 12:13; 15:25). "ಪರಿಶುದ್ಧರು" ಅಂದರೆ ಪಾಪವಿಲ್ಲದವರು ಎಂದಲ್ಲ, ಆದರೆ "ಪ್ರತ್ಯೇಕಿಸಲ್ಪಟ್ಟವರು"[10] ಎಂದರ್ಥ. ಬಾಪ್ತಿಸ್ಮದಲ್ಲಿ ದೇವರು ಕ್ರೈಸ್ತರನ್ನು ತನ್ನ ವಿಶೇಷ ಜನರಲ್ಲಿ ಒಬ್ಬರನ್ನಾಗಿ ಪ್ರತ್ಯೇಕಿಸಿ ಇಡುತ್ತಾನೆ (ತೀತ 2:14).
- "ಶಿಷ್ಯರು" (ಅಪೊಸ್ತಲರ ಕೃತ್ಯ 6:1, 2, 7; 9:1) ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಕ್ರಿಸ್ತನ ಹಿಂಬಾಲಕರನ್ನು ಸೂಚಿಸಿ ಆಗಾಗ ಈ ಪದ ಉಪಯೋಗಿಸಲ್ಪಟ್ಟಿದೆ. "ಹಿಂಬಾಲಕ" ಎಂಬ ಪದವು "ಕಲಿಯುವವನನ್ನು" ಸೂಚಿಸುತ್ತದೆ.[11]

ಸಭೆಯ ವೈಯಕ್ತಿಕ ಸದಸ್ಯನಿಗೆ ಉಪಯೋಗಿಸಿದ ವಿಶಿಷ್ಠವಾದ ಸೂಚಿತ ವರ್ಣನೆ "ಕ್ರೈಸ್ತ" ಎಂಬ ಪದ. ನಾವು ನೋಡಿದ ಇತರ ಸೂಚಿತ ವರ್ಣನೆಗಳಿಗಿಂತ ಭಿನ್ನವಾಗಿ ಇದನ್ನು ನಾವು ಒಂದು ಅಂಕಿತ ನಾಮದಂತೆ ಯೋಚಿಸಬಹುದು. (Christian ಎಂಬ ಪದದ ಪ್ರಾರಂಭದಲ್ಲಿ ದೊಡ್ಡ C ಇರುವದನ್ನು ಗಮನಿಸಿರಿ.) ಇದು ಹೊಸ ಒಡಂಬಡಿಕೆಯಲ್ಲಿ ಹೆಚ್ಚು ಸಲ ಕಂಡುಬರುವದಿಲ್ಲ. ಆದರೆ ಅದು ಕಂಡುಬರುವಾಗ, ವಿಶಿಷ್ಠವಾದ ರೀತಿಯಲ್ಲಿ ಉಪಯೋಗಿಸಲಪಟ್ಟಿರುವುದು, "ಶಿಷ್ಯರು ಮೊದಲು ಅಂತಿಯೋಕ್ಯದಲ್ಲಿ ಕ್ರೈಸ್ತರು ಎಂದು ಕರೆಯಲ್ಪಟ್ಟರು" ಎಂದು ಹೇಳಲ್ಪಟ್ಟಿದೆ (ಅಪೊಸ್ತಲರ ಕೃತ್ಯ 11:26). ಪೌಲನು ಅಗ್ರಿಪ್ಪನಿಗೆ ಪ್ರಸಂಗಿಸಿದನಂತರ ಅರಸನು ಅವನಿಗೆ ಹೀಗೆ ಹೇಳಿದನು: "ಬಹು ಸುಲಭವಾಗಿ ನನ್ನನ್ನು ಕ್ರೈಸ್ತನನ್ನಾಗಿ ಮಾಡಬಹುದೆಂದು ನೀನು ಯೋಚಿಸಿ ಕೊಂಡಿರುವಿಯಾ?" (ಅಪೊಸ್ತಲರ ಕೃತ್ಯ 26:28). "ಆದರೆ ಕ್ರೈಸ್ತನಾಗಿ ಬಾಧಪಟ್ಟರೆ ಅವನು ನಾಚಿಕೆಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ" (1 ಪೇತ್ರ 4:16) ಎಂದು ಪೇತ್ರನು ಬರೆದನು.

ನಿಯಮದಂತೆ, ಹೊಸ ಒಡಂಬಡಿಕೆಯ ಸೂಚಿತ ವರ್ಣನೆ ಯೇಸುವನ್ನು, ದೇವರನ್ನು ಗೌರವಿಸುತ್ತವೆಂದು ನಾನು ಮೊದಲು ಹೇಳಿದ್ದೇನೆ: "Christian" ಎಂಬ ಪದದಲ್ಲಿ ಇದು ಸ್ಪಷ್ಟವಾಗಿದೆ: "Christian" ಎಂಬುದರ ಮೂರರಲ್ಲಿ ಎರಡು ಭಾಗ "Christ."

"Christian" ಎಂಬ ಪದವು ಗ್ರೀಕ ಪದದ ಆಂಗ್ಲ ಪದವಾಗಿದೆ.[12] ಗ್ರೀಕ್‌ನಲ್ಲಿ "ಕ್ರಿಸ್ತ" ಎಂಬ ಪದಕ್ಕೆ "ನ" ಎಂಬುದನ್ನು ಸೇರಿಸಿ "ಒಬ್ಬನು ಕ್ರಿಸ್ತನವನು" ಎಂಬ ಅರ್ಥವನ್ನು ಕೊಡುತ್ತದೆ,

ಕ್ರೈಸ್ತನು = ಕ್ರಿಸ್ತನಿಗೆ ಸ್ವಂತ

ಸಂಗ್ರಹದ ತಳಹದಿಯ ಮೇಲೆ "ಕ್ರಿಸ್ತನ ಸಭೆ" ಎಂದಿರುವಂತೆ ಈ ಪದವು ಅದೇ ವೈಯಕ್ತಿಕ ತಳಹದಿಯ ಮೇಲೆ ಅರ್ಥ ಕೊಡುತ್ತದೆ: "Christian" ಅಂದರೆ ಕ್ರಿಸ್ತನಿಗೆ ವಶವಾದ ವ್ಯಕ್ತಿ ಎಂದರ್ಥ; "ಕ್ರಿಸ್ತನ ಸಭೆ" ಅಂದರೆ ಕ್ರಿಸ್ತನಿಗೆ ಒಳಪಟ್ಟ ಸಭೆ ಎಂದರ್ಥ.

ಧಾರ್ಮಿಕವಾಗಿ ನಾನು ಏನಾಗಿದ್ದೇನೆಂದು ನಾನು ಕೇಳಲ್ಪಡುವಾಗ "ನಾನು ಕ್ರೈಸ್ತನು" ಎಂದು ಉತ್ತರ ಕೊಡುತ್ತೇನೆ. ಕೆಲವು ಸಲ "ಆದರೆ ನೀವು ಯಾವ ಧಾರ್ಮಿಕ ಸಭಾ ಪಂಗಡದ ಸದಸ್ಯರಾಗಿರುವಿರಿ?" ಎಂದು ಒತ್ತಾಯ ಪಡಿಸಲ್ಪಡುತ್ತೇನೆ. ಆಗ ನಾನು "ಕ್ರಿಸ್ತನಿಗೆ ಒಳಪಟ್ಟ ಸಭೆಯ ಸದಸ್ಯನಾಗಿರುವೆನು," ಇಲ್ಲವೆ "ಕ್ರಿಸ್ತನ ಸಭೆಗೆ" ಅಥವಾ "ಚರ್ಚ್ ಆಫ್ ಕ್ರೈಸ್ಟ್" ಎಂದು ಉತ್ತರ ಕೊಡುತ್ತೇನೆ. ಎಲ್ಲಾ ಸಮಯಗಳಲ್ಲಿ ನಾನು ನನ್ನ ಕರ್ತನನ್ನು ಗೌರವಿಸಲು ಅಪೇಕ್ಷಿಸುತ್ತೇನೆ.

## ಮುಕ್ತಾಯ

ಮಾನವ ನಿರ್ಮಿತ ಹೆಸರುಗಳನ್ನು ಧರಿಸುವುದು ಪಂಗಡವನ್ನುಂಟು ಮಾಡುತ್ತದೆ. ಇದು ಇಂದು ಸತ್ಯವಾಗಿದೆ; ಅದು ಬೈಬಲ್ ಸಮಯಗಳಲ್ಲಿ ಸತ್ಯವಾಗಿತ್ತು. ಪೌಲನು ಕೊರಿಂಥ ಸಭೆಗೆ ಬರೆದಾಗ ಅದು ವಿವಿಧ ಗುಂಪುಗಳಾಗಿ ಹೋಗಲು ಪ್ರಾರಂಭಿಸಿತ್ತು:

> ಸಹೋದರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಭೇದಗಳಿರಬಾರದು. ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಯಾಕಂದರೆ ನನ್ನ ಸಹೋದರರೇ, ನಿಮ್ಮಲ್ಲಿ ಜಗಳಗಳುಂಟೆಂದು ನಿಮ್ಮ ವಿಷಯವಾಗಿ ... ತಿಳಿದು ಬಂತು, ನಿಮ್ಮೊಳಗೆ ಪ್ರತಿಯೊಬ್ಬನು - ನಾನು ಪೌಲನವನು, ಇಲ್ಲವೇ - ನಾನು ಅಪೊಲ್ಲೋಸನವನು,[13] ಅಥವಾ ನಾನು ಕೇಫನವನು[14] ಇಲ್ಲವೆ - ನಾನು ಕ್ರಿಸ್ತನವನು ಎಂದು ಹೇಳಿಕೊಳ್ಳುತ್ತಾನೆ (1 ಕೊರಿಂಥ 1:10-12).

"ಪೌಲನವನು" ಮತ್ತು "ಅಪೊಲ್ಲೋಸನವನು" ಎಂಬಂಥ ಮಾತುಗಳು, ಮೊದಲು ರೋಮಾಪುರ 16:16ರಲ್ಲಿ ಹೇಳಿದಂತೆ, ವ್ಯಕ್ತಿಗಳ ವಶವಾಗಿರುವದನ್ನು ಸೂಚಿಸುತ್ತದೆ. ಅವರು ಅಕ್ಷರಶಃವಾಗಿ "ನಾನು ಪೌಲನಿಗೆ ಸೇರಿದವನು," "ನಾನು ಅಪೊಲ್ಲೋಸನಿಗೆ ಸೇರಿದವನು" ಇತ್ಯಾದಿಯಾಗಿ ಹೇಳಿದರು. ಇಂದು ನಾವು "ನಾನು ಪೌಲನ ಗುಂಪಿಗೆ ಸೇರಿದವನು" ಎಂದು ಹೇಳುತ್ತೇವೆ. "ಕ್ರಿಸ್ತನು ವಿಭಾಗವಾಗಿರುವನೋ? ಪೌಲನು ನಿಮಗಾಗಿ ಶಿಲುಬೆಗೆ ಹಾಕಲ್ಪಟ್ಟನೋ, ಇಲ್ಲವಲ್ಲ? ಇಲ್ಲವೇ ಪೌಲನ ಹೆಸರಿನಲ್ಲಿ ನೀವು ಬಾಪ್ತಿಸ್ಮ ಹೊಂದಿದಿರೋ?" ಎಂದು ಕೇಳುವದರ ಮೂಲಕ ಹಾಗೆ ಹೇಳಿಕೊಂಡವರಿಗೆ ನಾಚಿಕೆ ಯಾಗುವಂತೆ ಮಾಡಿದನು (1 ಕೊರಿಂಥ 1:13). ಮಾನವನ ಪಾಪಕ್ಕಾಗಿ ಕ್ರಿಸ್ತನು ಮಾತ್ರವೇ ಶಿಲುಬೆಗೆ ಹಾಕಲ್ಪಟ್ಟನು (1 ಕೊರಿಂಥ 1:23). ವಿಶ್ವಾಸಿಗಳು ಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಹೊಂದಿದರು (ಅಪೊಸ್ತಲರ ಕೃತ್ಯ 2:38); ಆದುದರಿಂದ ಅವರು ಆತನ ಹೆಸರನ್ನು ಮಾತ್ರ ಧರಿಸಬೇಕು.

ನನ್ನನ್ನು ತಪ್ಪಾಗಿ ತಿಳಿಯ ಬೇಡಿರಿ: ಸರಿಯಾದ ನೇಮಕವಾದ ಹೆಸರು ತನ್ನಲ್ಲಿ

ತಾನೇ ಸಾಕಷ್ಟಾದದ್ದಾಗಿರುವದಿಲ್ಲ. "ಮರ್ಸೆಡಿಸ್ ಬೆಂಜ" ಎಂದು ನನ್ನ ವಾಹನದ ಮೇಲೆ ಪೇಂಟ ಮಾಡಬಹುದು ಆದರೆ ಅದು ಮೆರ್ಸೆಡಿಸ್ ಬೆಂಜ ಆಗಿರಲಿಕ್ಕಿಲ್ಲ.[15] ಬೈಬಲಿನ ಸೂಚನೆಯ ವರ್ಣನೆಯು, "ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ" (ಅಪೊಸ್ತಲರ ಕೃತ್ಯ 4:12) ಎಂದು ಕ್ರಿಸ್ತನ ಹೆಸರನ್ನು ಕುರಿತು ಪೇತ್ರನು ಹೇಳಿದ್ದನ್ನು ಜ್ಞಾಪಿಸಿಕೊಳ್ಳಿರಿ. "ಆ ಹೆಸರಿನಿಂದಲೇ ದೇವರನ್ನು ಘನಪಡಿಸಲು" ಎಂದು ಅನಂತರದಲ್ಲಿ ಆತನು ಬರೆದನು (1 ಪೇತ್ರ 4:16).

---

ಟಿಪ್ಪಣಿಗಳು

[1]ನಾನು ಜನರೊಂದಿಗೆ ಅಧ್ಯಯನ ಮಾಡುವಾಗ, "ಬೈಬಲ್ ಸಮಯದಲ್ಲಿ ಕೇವಲ ಒಂದೇ ಸಭೆಯಿದ್ದರೆ ಎಲ್ಲಾ ಸಭೆಗಳು ಎಲ್ಲಿಂದ ಬಂದವು?" ಎಂದು ನನ್ನನ್ನು ಪ್ರಶ್ನಿಸುತ್ತಾರೆ. ಇಲ್ಲವೇ "ಯಾಕೆ ಅನೇಕ ಸಭಾ ಪಂಗಡಗಳು ಅಸ್ತಿತ್ವದಲ್ಲಿವೆ?" ಎಂದು ಪ್ರಶ್ನಿಸುತ್ತಾರೆ. ಪ್ರವಾದಿಸಲ್ಪಟ್ಟಂತೆಯೇ ಮನುಷ್ಯರು ಸತ್ಯವನ್ನು ಬಿಟ್ಟುಹೋದರು ಎಂಬುದು ಅತೀ ಸರಳವಾದ ಉತ್ತರವಾಗಿದೆ (ಅಪೊಸ್ತಲರ ಕೃತ್ಯ 20:29, 30; 1 ತಿಮೊಥೆ 4:1-3; 2 ತಿಮೊಥೆ 4:1-4 ಓದಿರಿ). [2]ನಿಯಮದ ಪ್ರಕಾರವಾಗಿ ಸರ್ವನಾಮವು ದೊಡ್ಡ ಅಕ್ಷರದಿಂದ ಪ್ರಾರಂಭವಾಗುತ್ತದೆ. [3]"Church" ಎಂಬ ಪದವನ್ನು ವಾಕ್ಯದ ಮೊದಲನೆಯ ಪದವಾಗಿ ಇಲ್ಲವೇ (ಶೀರ್ಷಿಕೆ) ಉಪಯೋಗಿಸಲ್ಪಟ್ಟಾಗ ಅಪವಾದ ಮಾಡಲ್ಪಡುತ್ತದೆ. [4]ಇದಕ್ಕೆ ನನ್ನ ಆಕ್ಷೇಪಣೆಯಿಲ್ಲ. ಯಾಕಂದರೆ ಹೊಸ ಒಡಂಬಡಿಕೆಯ ಮೊದಲಿನ ಕೈಬರಹ ಪ್ರತಿಗಳು ದೊಡ್ಡ ಅಕ್ಷರಗಳನ್ನು ಇಲ್ಲವೇ ಚಿಕ್ಕ ಅಕ್ಷರಗಳನ್ನು ಉಪಯೋಗಿಸಿರುವವು. [5]NASBಯಲ್ಲಿ "ದೇವರ ಸಭೆ" ಎಂದಿದೆ. ಸಂದರ್ಭದ ಹಿನ್ನೆಲೆಯು ಇದು ದೇವರ ಕುಮಾರನು ಎಂದು ಹೇಳುತ್ತದೆ. [6]ಮೂಲ ಪಠ್ಯದಲ್ಲಿ "ಚೊಚ್ಚಲ ಸಭೆ" ಎಂಬ ಮಾತು ಬಹುವಚನದಲ್ಲಿದೆ. ಇದರ ಅರ್ಥ "ಸಭೆಯು ಚೊಚ್ಚಲು ಮಕ್ಕಳನ್ನು ಒಳಗೊಂಡಿದೆ" ಅಂದರೆ ಕ್ರೈಸ್ತರನ್ನು ಒಳಗೊಂಡಿರುತ್ತದೆ. [7]"ಪವಿತ್ರ ಮುದ್ದಿಟ್ಟು ಒಬ್ಬರನೊಬ್ಬರು ವಂದಿಸಿರಿ" ಎಂದು ರೋಮಾಪುರ 16:16 ಪ್ರಾರಂಭವಾಗುತ್ತದೆ. ಆ ದಿನಗಳಲ್ಲಿ ಪುರುಷರು ಪುರುಷರೊಂದಿಗೆ ಮತ್ತು ಸ್ತ್ರೀಯರು ಸ್ತ್ರೀಯರೊಂದಿಗೆ ಮುದ್ದಿನಿಂದ ವಂದಿಸುತ್ತಿದ್ದರು (ಇದು ಲೋಕದ ಕೆಲವು ಭಾಗ ಗಳಲ್ಲಿ ಇನ್ನೂ ಪದ್ಧತಿಯಾಗಿದೆ). ಇದು ಒಬ್ಬರನ್ನೊಬ್ಬರು ಮುದ್ದಿನಿಂದ ವಂದಿಸಿರಿ ಎಂಬ ಆಜ್ಞೆಯಾಗಿರುವದಿಲ್ಲ. "ಪವಿತ್ರ" ಎಂಬ ಪದದ ಮೇಲೆ ಒತ್ತು ಇದೆ; ಒಬ್ಬರನ್ನೊಬ್ಬರು ಆಸಕ್ತಿಯಿಂದ ವಂದಿಸಿರಿ ಎಂದರ್ಥ. ಲೋಕದ ನಮ್ಮ ಭಾಗದಲ್ಲಿ "ಮತಾರ್ಥವಾಗಿ ಕೈಕುಲುಕುವದರಿಂದ ಒಬ್ಬರನ್ನೊಬ್ಬರು ವಂದಿಸಿರಿ" ಎಂದು ನಾವು ಹೇಳಬಹುದು. [8]("Christ's"ದ ಅಂತ್ಯ ಭಾಗದಲ್ಲಿಯಂತೆ) ಹೊಂದಿಕೊಂಡಿರುವದನ್ನು ಸೂಚಿಸಲು "s" ದೊಂದಿಗೆ ಸಂಬೋಧನೆಯ ಗುರುತನ್ನು ಗ್ರೀಕ ಉಪಯೋಗಿಸಿಲ್ಲ. ಸಾಮಾನ್ಯವಾಗಿ ಷಷ್ಠಿ ವಿಭಕ್ತಿಯನ್ನು ಉಪಯೋಗಿಸುವದರಿಂದ ಹೊಂದಿಕೊಂಡಿರುವದನ್ನು ಸೂಚಿಸಿದರು. ಅದು "of this" ಇಲ್ಲವೇ "of that" ಎಂದು ಭಾಷಾಂತರಿಸಲ್ಪಟ್ಟಿತು. [9]ಹೊಸ ಒಡಂಬಡಿಕೆಯಲ್ಲಿ "brother" ಎಂಬುದರ ಬಹುವಚನ "brethren"ಎಂದಿದೆ. [10]"Saint"ಎಂಬ ಪದವು "sanctified" ಎಂಬ ಮೂಲ ಗ್ರೀಕ ಪದದಿಂದ ಬರುತ್ತದೆ.

[11]"ಶಿಷ್ಯನು" ಯಾವುದೇ ನಾಯಕನ ಅನುಯಾಯಿ ಆಗಿರಬಹುದು. ಒಬ್ಬನು ಕ್ರಿಸ್ತನ ಹಿಂಬಾಲಕನಾಗಿರುವನೋ, ಇಲ್ಲವೋ ಎಂಬುದನ್ನು ಹಿನ್ನೆಲೆಯು ನಿರ್ಧರಿಸುತ್ತದೆ. [12]"Anglicized" ಅಂದರೆ ಒಂದು ಗ್ರೀಕ ಪದದಿಂದ ಒಂದು ಇಂಗ್ಲೀಷ್ ಪದವನ್ನು ಮಾಡಿದರು ಎಂದರ್ಥ. [13]ಅಪೊಲ್ಲೊಸನು ಕೊರಿಂಥದ ಕ್ಷೇತ್ರದಲ್ಲಿ ಕೆಲ ಸಮಯ ಪ್ರಸಂಗಿಸಿದನು (ಅದು ಅಖಾಯದಲ್ಲಿ). (ಅಪೊಸ್ತಲರ ಕೃತ್ಯ 18:27, 28 ನೋಡಿರಿ.) [14]ಕೇಫ ಎಂಬುದು ಅಪೊಸ್ತಲ ಪೇತ್ರನಿಗೆ ಇನ್ನೊಂದು ಹೆಸರು (ಯೋಹಾನ 1:42). [15]ಮರ್ಸೆಡಿಸ್ ಬೆಂಜ ಬಹಳ ಬೆಲೆಯುಳ್ಳ ವಾಹನ.

© 2009 Truth for Today